# ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 06 ಬಿಪಿಇ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:03-01-2020

## ಸುತ್ತೋಲೆ

ವಿಷಯ: 2020-21ನೇ ಸಾಲಿನ ವೇತನಗಳ ಅಂದಾಜು ಕುರಿತು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಆಇ 06 ಬಿಪಿಇ 2019 ದಿನಾಂಕ:27.09.2019.

* * *

2020-21ನೇ ಸಾಲಿನ ವೇತನಗಳ ಅಂದಾಜುಗಳನ್ನು ಅಂದಾಜಿಸುವ ವಿಧಾನ ಕುರಿತಂತೆ ಮಾರ್ಗ ಸೂಚಿಗಳನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ಹೊರಡಿಸಲಾಗಿದೆ. ಅದರಂತೆ ಇಲಾಖೆಗಳಿಂದ ಮಂಜೂರಾದ ಹುದ್ದೆಗಳಿಗೆ ದೃಢೀಕರಣ ಪಡೆದು ಹೆಚ್.ಆರ್.ಎಂ.ಎಸ್. ನಿಂದ ಕಾರ್ಯನಿರತ ಹುದ್ದೆಗಳ ವಿವರಗಳನ್ನು ಪಡೆದು ಆರ್ಥಿಕ ಇಲಾಖೆಯಲ್ಲಿ ವೇತನ ಅಂದಾಜಿಸಲಾಗುತ್ತಿದೆ. ಈ ವರ್ಷದಿಂದ ಎಲ್ಲಾ ಇಲಾಖೆಗಳೂ ಖಜಾನೆ-2 ವ್ಯಾಪ್ತಿಗೆ ಬಂದಿದ್ದು, ವೇತನದಲ್ಲಿ ಅವಕಾಶವಿಲ್ಲದಿದ್ದಲ್ಲಿ ವೇತನ ಸೆಳೆಯಲಾಗುವುದಿಲ್ಲ. ಆದ್ದರಿಂದ ವೇತನಕ್ಕಾಗಿ ಹೆಚ್ಚುವರಿ ಅನುದಾನ ಕೋರಿ (additionality) ಪ್ರಸ್ತಾವನೆಗಳು ಹೆಚ್ಚಾಗಿ ಸ್ವೀಕೃತವಾಗುತ್ತಿರುವುದರಿಂದ, ವೇತನಗಳಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಕೆಳಕಂಡ ಸೂಚನೆಗಳನ್ನು ಅನುಸರಿಸಲು ಸೂಚಿಸಿದೆ.

1) ಪ್ರತಿ ಆರ್ಥಿಕ ಸಾಲಿನಲ್ಲಿ ಫೆಬ್ರವರಿ ತಿಂಗಳ ವೇತನವನ್ನು ಮುಂದಿನ ಆರ್ಥಿಕ ಸಾಲಿಗೆ ಮುಂದೂಡದೆ, ಕಡ್ಡಾಯವಾಗಿ ಅದೇ ಆರ್ಥಿಕ ಸಾಲಿನಲ್ಲಿ ಸೆಳೆಯುವುದು.

2) ತುಟ್ಟಿಭತ್ಯೆ ಬಾಕಿ ಹೊರತುಪಡಿಸಿ ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದು.

3) 6ನೇ ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ ಸಾಮಾನ್ಯವಾಗಿ ಅನ್ವಯವಾಗುವ ಭತ್ಯೆಗಳನ್ನು ವೇತನಕ್ಕೆ ಸೇರಿಸಿ ಒದಗಿಸಲಾಗುವುದರಿಂದ ಯಾವುದೇ ಇಲಾಖೆ ವಿಶೇಷವಾಗಿ ಭತ್ಯೆಗಳನ್ನು ನೀಡುತ್ತಿದ್ದಲ್ಲಿ ಅದನ್ನು ಸೂಕ್ತ ದಾಖಲೆಗಳೊಂದಿಗೆ ಗಣಕ ಕೋಶಕ್ಕೆ ಸಲ್ಲಿಸಿ ಒದಗಿಸಿಕೊಳ್ಳಲು ಸೂಚಿಸಿದೆ.

(ಪವನ್ ಕುಮಾರ್ ಮಾಲಪಾಟಿ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆ ಮತ್ತು ಸಂ)

ಇವರಿಗೆ:

1) ಮಹಾಲೇಖಪಾಲರು (ಎ&ಇ) (ಜಿ&ಎಸ್.ಎಸ್ಎ), (ಇ&ಆರ್.ಎಸ್ಎ), ಬೆಂಗಳೂರು.

2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು & ಕಾರ್ಯದರ್ಶಿಗಳು.
3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
4) ಎಲ್ಲಾ ಜಿಲ್ಲಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
8) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ ಕಾರ್ಯದರ್ಶಿಗಳು / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
9) ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.